# ಸಿಮ್ರನ್ ಯಶೋಗಾಥೆ ಅಸಾಮಾನ್ಯ



■ ರಾಹುಲ ಬೆಳಗಲಿ

ಗಣರಾಜ್ಯೋತ್ಸವ ದಿನಾಚರಣೆ ಪ್ರಯುಕ್ತ ನವದೆಹಲಿಯಲ್ಲಿ ನಡೆದ ಪಥಸಂಚಲನವು (ಪರೇಡ್) ಈ ಸಲವೂ ಹಲವು ವಿಶೇಷತೆಗಳಿಂದ ಕೂಡಿತ್ತು. ಇನ್ನಷ್ಟು ಸೂಕ್ಷ್ಮವಾಗಿ ಗಮನಿಸಿ, ಅದರಲ್ಲೂ ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಪಥಸಂಚಲನವನ್ನು ನೋಡಿದರೆ, ನಿಶ್ಚಿತವಾಗಿ ಇನ್ನೊಂದು ವಿಶಿಷ್ಟತೆ ಅರಿವಿಗೆ ಬರುತಿತ್ತು. ಅದೇನೆಂದರೆ, ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಪುರುಷರ ಸಿಆರ್‌ಪಿಎಫ್ ಪಡೆಯ ಪಥಸಂಚಲನ ಮತ್ತು ಧ್ವಜವಂದನೆ ಸಲ್ಲಿಸುವ ಪ್ರಕ್ರಿಯೆಯ ನೇತೃತ್ವವನ್ನು ಮಹಿಳಾ ಅಧಿಕಾರಿ ಸಿಮ್ರನ್ ಬಾಲಾ ವಹಿಸಿದ್ದರು. ತಮ್ಮ ಜವಾಬ್ದಾರಿಯನ್ನು ಸಮರ್ಪಕವಾಗಿ ನಿಭಾಯಿಸಿ, ಅವರ ಹುಟ್ಟೂರು ನೌಶೇರಾಗೂ ಹೆಮ್ಮೆ ಮೂಡಿಸಿದರು. ಜೊತೆಗೆ 'ಹೆಣ್ಣುಮಕ್ಕಳು ಎಂದರೆ ಸಾಮಾನ್ಯರಲ್ಲ' ಎಂಬ ಸ್ಪಷ್ಟ ಸಂದೇಶವನ್ನು ರವಾನಿಸಿದರು.

ಪಾಕಿಸ್ತಾನ ಮತ್ತು ಭಾರತ ಗಡಿರೇಖೆಯಿಂದ ಕೆಲವೇ ಕಿಲೋಮೀಟರ್ ದೂರದಲ್ಲಿರುವ ಜಮ್ಮು ಕಾಶ್ಮೀರದ ರಾಜೌರಿ ಜಿಲ್ಲೆಯ ನೌಶೇರಾ ಎಂಬ ಗ್ರಾಮದಲ್ಲಿ ಜನಿಸಿದ ಸಿಮ್ರನ್ ಮಾಡಿರುವ ಈ ಸಾಧನೆ ಅಪರೂಪ ಮತ್ತು ಅಭಿಮಾನ ಮೂಡಿಸುವಂತಹದ್ದು. ನಿತ್ಯವೂ ಯುದ್ಧದ ವಾತಾವರಣ, ಗುಂಡುಗಳ ಮೊರೆತ, ಸಾವು ನೋವುಗಳ ಆಕ್ರಂದನ ಕೇಳಿ ಬರುವ ಪ್ರದೇಶದಿಂದ ಬಂದ ಸಿಮ್ರನ್, ಆತಂಕದ ವಾತಾವರಣಕ್ಕೆ ಕಿಂಚಿತ್ತೂ ಹೆದರಿಕೊಳ್ಳಲಿಲ್ಲ. ದೂರದಲ್ಲಿ ಎಲ್ಲೋ ಬಾಂಬ್ ಸ್ಫೋಟಿಸಿದ ಸದ್ದು ಬಂದರೂ, ಸಮೀಪದಲ್ಲೇ ಭಯೋತ್ಪಾದಕರು ನುಸುಳಿದ್ದಾರೆ ಎಂಬ ಸುದ್ದಿ ಹಬ್ಬಿದರೂ ಸ್ವಲ್ಪವೂ ವಿಚಲಿತಗೊಳ್ಳಲಿಲ್ಲ. ದೇಶಸೇವೆಯಲ್ಲಿ ತೊಡಗಲು ಬಾಲ್ಯದಲ್ಲೇ ಪಣ ತೊಟ್ಟ ಅವರು, ಅದಕ್ಕೆ ಹಂತಹಂತವಾಗಿ ತರಬೇತಿ ಪಡೆದರು. ದೈಹಿಕ, ಮಾನಸಿಕವಾಗಿ ಗಟ್ಟಿಯಾದರು.

ಶಾಲಾ–ಕಾಲೇಜು ಶಿಕ್ಷಣವನ್ನು ಜಮ್ಮುವಿನಲ್ಲೇ ಪೂರ್ಣಗೊಳಿಸಿದ ಸಿಮ್ರನ್ ಅವರು ದೇಶದ ಅತ್ಯಂತ ಕಠಿಣ ಪರೀಕ್ಷೆ ಎಂದೇ ಪರಿಗಣಿಸಿರುವ ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಕೇಂದ್ರ ಸಶಸ್ತ್ರ ಪೊಲೀಸ್ ಪಡೆ (ಸಿಎಪಿಎಫ್) ಪರೀಕ್ಷೆ ಎದುರಿಸಲು ಹಿಂಜರಿಯಲಿಲ್ಲ. 2023ರಲ್ಲಿ ಪರೀಕ್ಷೆ ಬರೆದ ಮೊದಲ ಯತ್ನದಲ್ಲೇ ಯಶ ಗಳಿಸಿದ ಅವರು ದೇಶಕ್ಕೆ 82ನೇ ರ‍್ಯಾಂಕ್ ಗಳಿಸಿದರು.

ದೇಶದ ವಿವಿಧೆಡೆ ಉದ್ಯೋಗ ಗಳಿಸಲು ಅವಕಾಶಗಳು ಇರುವಾಗ, ಭದ್ರತಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಲು ಯಾಕೆ ಬಯಸಿದ್ದೀರಿ ಎಂದು ಕೇಳಿದಾಗ, ಅವರು ಅರ್ಥಪೂರ್ಣವಾಗಿ ಹೇಳಿದ್ದು ಎರಡೇ ಸಾಲು. 'ಜಮ್ಮು ಕಾಶ್ಮೀರದಿಂದ ನಾನೊಬ್ಬಳೇ ಯುವತಿ ಸಿಎಪಿಎಫ್ ಪರೀಕ್ಷೆಯನ್ನು ಯಶಸ್ವಿಯಾಗಿ ಎದುರಿಸಿ, ಉತ್ತೀರ್ಣಳಾಗಿದ್ದೇನೆ. ಇದು ನನ್ನ ಪಾಲಿಗೆ ಹೆಮ್ಮೆಯ ವಿಷಯ. ಗಡಿ ಪ್ರದೇಶದಲ್ಲಿ ಗುಂಡುಗಳ ಮೊರೆತ ಮತ್ತು ಯುದ್ಧದ ಸನ್ನಿವೇಶ ನೋಡುತ್ತಾ ಬೆಳೆದವಳು ನಾನು. ಗಡಿಯಲ್ಲಿ ಭದ್ರತಾ ಕರ್ತವ್ಯ ನಿರ್ವಹಿಸುವ ಗುರಿ ಇದೆ'.

ಸಿಎಪಿಎಫ್ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡ ಬಳಿಕ ಸಹಾಯಕ ಕಮಾಂಡೆಂಟ್ ಆಗಿ ನೇಮಕಗೊಂಡ ಸಿಮ್ರನ್, ಹರಿಯಾಣ ರಾಜ್ಯ ಗುರುಗ್ರಾಮದ ಸಿಆರ್‌ಪಿಎಫ್ ಅಕಾಡೆಮಿಯಲ್ಲಿ ತರಬೇತಿ ಪಡೆದರು. ಕಾರ್ಯಕ್ಷಮತೆ ಮತ್ತು ಸಂವಹನ ಕಲೆಯ ಮೂಲಕ ಪ್ರತಿಭೆ ಮತ್ತು ಸಾಮರ್ಥ್ಯ ಸಾಬೀತುಪಡಿಸಿದ ಅವರು ಉತ್ತಮ ಅಧಿಕಾರಿಯಾಗಿ ಗುರುತಿಸಲ್ಪಟ್ಟರು. ಕಳೆದ ವರ್ಷ ಏಪ್ರಿಲ್‌ನಲ್ಲಿ ಸಿಆರ್‌ಪಿಎಫ್ ಪಡೆ ಸೇರಿದ ಅವರು, ಛತ್ತೀಸಗಢ್‌ನ ಬಸ್ತರಿಯಾ ಬೆಟಾಲಿಯನ್‌ಗೆ ಸೇರಿದರು. ನಕ್ಸಲ್ ಪ್ರಭಾವ ಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಸಿದರು. ಪಡೆಯ ಸಿಬ್ಬಂದಿಗೆ ಧೈರ್ಯ ಮತ್ತು ಆತ್ಮವಿಶ್ವಾಸ ಮೂಡಿಸಿದರು.

ದೇಶದ ಭದ್ರತಾ ವಲಯದ ಪ್ರಮುಖ ಅಧಿಕಾರಿಯಾಗಿ ಉನ್ನತ ಹುದ್ದೆಗೇರಿದರೂ ಸಿಮ್ರನ್ ತಮ್ಮ ಬಾಲ್ಯದ ದಿನಗಳನ್ನು ಮತ್ತು ಈ ಎತ್ತರಕ್ಕೆ ಬೆಳೆಯಲು ನೆರವಾದವರನ್ನು ಮರೆತಿಲ್ಲ. ಮರೆಯಲು ಇಚ್ಛಿಸುವುದೂ ಇಲ್ಲ. 'ತಂದೆ ತಾಯಿ, ಶಿಕ್ಷಕರು ನನ್ನ ಮೇಲೆ ನಂಬಿಕೆಯಿಟ್ಟು, ಗುರಿ ಮುಟ್ಟಲು ಪ್ರೇರೇಪಿಸಿದರು. ನಿರಂತರ ಪರಿಶ್ರಮ, ಏಕಾಗ್ರತೆ ಮತ್ತು ಆತ್ಮವಿಶ್ವಾಸದ ನುಡಿಗಳಿಂದ ನಾನು ಪ್ರಭಾವಿತಳಾಗಿ, ಉನ್ನತ ಸಾಧನೆ ಮಾಡಲು ಸಾಧ್ಯವಾಯಿತು' ಎಂದು ಹೇಳುತ್ತಾರೆ.

ಸಿಮ್ರನ್ ಸಾಧನೆ ಕುರಿತು ಅವರ ತಂದೆ ವಿನೋದ ಚೌಧರಿ ಮತ್ತು ಶ್ರಿಷ್ಟಾದೇವಿ ಕೂಡ ಹೆಮ್ಮೆಪಡುತ್ತಾರೆ. 'ಸಿಮ್ರನ್ ಹಗಲು, ರಾತ್ರಿಯೆನ್ನದೇ ಗುರಿ ಸಾಧಿಸಲು ಶ್ರಮಿಸಿದಳು. ಅವಳ ಕುರಿತು ಅಭಿಮಾನ ಹೆಚ್ಚಿದೆ. ಹೆಮ್ಮೆಯೂ ಮೂಡಿದೆ' ಎಂದು ವಿನೋದ ಚೌಧರಿ ಹೇಳುವಾಗ ಕಣ್ಣಂಚಿನಲ್ಲಿ ಆನಂದಭಾಷ್ಪವಿತ್ತು.

ಇನ್ನು ತಾಯಿ ಶ್ರಿಷ್ಟಾದೇವಿ ಎಲ್ಲರಿಗೂ ಸಂದೇಶವನ್ನೇ ನೀಡಿದರು. 'ನಾನು ಎಲ್ಲಾ ತಂದೆ–ತಾಯಂದಿರಿಗೆ ಒಂದು ಮಾತನ್ನು ಹೇಳಲು ಬಯಸುತ್ತೇನೆ. ನಿಮ್ಮ ಪುತ್ರಿಯರನ್ನು ಓದಿಸಿ. ಚೆನ್ನಾಗಿ ಪೋಷಿಸಿ. ಆಕೆಯ ಗುರಿ, ಆಸೆ ಮತ್ತು ಆಕಾಂಕ್ಷೆಗಳಿಗೆ ಸ್ಪಂದಿಸಿ. ಪುತ್ರಿಯರು ಕುಟುಂಬ, ಮನೆತನ, ರಾಜ್ಯಕ್ಕೆ ಅಷ್ಟೇ ಅಲ್ಲ ದೇಶಕ್ಕೆ ಹೆಸರು ತರುತ್ತಾರೆ. ಉತ್ತಮ ಸಾಧನೆ ಮಾಡುತ್ತಾರೆ' ಎಂದು ಹೇಳುವಾಗ, ಅವರ ಮುಖದಲ್ಲಿ ಹರ್ಷದ ಭಾವವಿತ್ತು.

ಇನ್ನೊಂದು ವಿಷಯ, ಸಿಮ್ರನ್ ಅವರ ವಯಸ್ಸು 26. ಉನ್ನತ ಸಾಧನೆ ಮಾಡುವ ಮೆಟ್ಟಿಲನ್ನು ಈಗಿನ್ನೂ ಹತ್ತಿದ್ದಾರೆ. ಸಾಧನೆಗಳ ಉನ್ನತ ಶಿಖರವನ್ನು ತಲುಪಲಿ ಎಂದು ಹಾರೈಸೋಣ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65